# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 885

**ಸದಸ್ಯರ ಹೆಸರು** : ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

**ಉತ್ತರಿಸುವವರು** : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು

**ಉತ್ತರಿಸಬೇಕಾದ ದಿನಾಂಕ** : 14.03.2025

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಅಂಗನವಾಡಿಗಳಿಗೆ ಆಹಾರ ಸಾಮಗ್ರಿ ಸರಬರಾಜು ಮಾಡುವ ಗುತ್ತಿಗೆಯನ್ನು ಯಾರಿಗೆ ಮತ್ತು ಎಷ್ಟು ವರ್ಷಕ್ಕೆ ನೀಡಲಾಗಿದೆ; (ಪೂರ್ಣ ವಿವರ ನೀಡುವುದು.) | ಮಾನ್ಯ ಸರ್ವೋಚ್ಚ ನ್ಯಾಯಾಲಯದ ದಿನಾಂಕ: 07-10-2004 ರ ಆದೇಶದ ಸೂಚನೆಯಂತೆ ಸರ್ಕಾರಿ ಆದೇಶವನ್ನು ಹೊರಡಿಸಲಾಗಿದ್ದು, ಅದರಂತೆ 2008 ರಿಂದ ಇಲ್ಲಿಯವರೆಗೆ ಸರ್ಕಾರದ ವತಿಯಿಂದಲೇ ಸ್ಥಾಪಿಸಲಾದ ಮಹಿಳಾ ಪೂರಕ ಪೌಷ್ಠಿಕ ಆಹಾರ ಉತ್ಪಾದನಾ ಕೇಂದ್ರ (ಎಂ.ಎಸ್.ಪಿ.ಸಿ.) ಗಳಿಂದ ರಾಜ್ಯದ ಅಂಗನವಾಡಿ ಕೇಂದ್ರಗಳಲ್ಲಿನ ಫಲಾನುಭವಿಗಳಿಗೆ ಪೂರಕ ಪೌಷ್ಠಿಕ ಆಹಾರವನ್ನು ಸರಬರಾಜು ಮಾಡಿತ್ತಿದ್ದು, ಯಾವುದೇ ಗುತ್ತಿಗೆಯನ್ನು ನೀಡಿರುವುದಿಲ್ಲ. |
| ಆ) | ನೀಡಲಾದ ಗುತ್ತಿಗೆಯಲ್ಲಿ ಯಾವ ಯಾವ ಆಹಾರ ಸಾಮಗ್ರಿಗಳನ್ನು ಒದಗಿಸಲು ಗುತ್ತಿಗೆ ನೀಡಲಾಗಿದೆ; (ಆಹಾರ ಸಾಮಾಗ್ರಿಗಳ ಪೂರ್ಣ ವಿವರ ನೀಡುವುದು) | |
| ಇ) | ಗುತ್ತಿಗೆ ನೀಡುವಾಗ ಸ್ಥಳೀಯ ಗುತ್ತಿಗೆದಾರರನ್ನು ಕಡೆಗಣನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಪೂರಕ ಪೌಷ್ಠಿಕ ಆಹಾರ ತಯಾರಿಕೆಗೆ ಅಗತ್ಯವಿರುವ ಅಕ್ಕಿ ಮತ್ತು ಗೋಧಿಯನ್ನು ಭಾರತೀಯ ಆಹಾರ ನಿಗಮದಿಂದ, ಎಣ್ಣೆಯನ್ನು ಕೆ.ಓ.ಎಫ್.ನಿಂದ ಹಾಗೂ ಹಾಲಿನ ಪುಡಿಯನ್ನು ಕೆ.ಎಂ.ಎಫ್.ನಿಂದ ಖರೀದಿಸಲಾಗುತ್ತದೆ.<br>ಉಳಿದ ಕಚ್ಚಾ ಆಹಾರ ಪದಾರ್ಥಗಳಾದ ಕಡಲೆಬೇಳೆ, ತೊಗರಿಬೇಳೆ, ಸಕ್ಕರೆ, ಬೆಲ್ಲ, ಉಪ್ಪು, ರಾಗಿ, ಸೋಯಾ ಹಿಟ್ಟು, ಹೆಸರುಕಾಳು, ಒಣ ಮೆಣಸಿನಕಾಯಿ, ಸಾಸಿವೆ, ಅರಿಶಿನ, ಉದ್ದಿನಬೇಳೆ ಮತ್ತು ಸಾಂಬಾರ್ ಮಸಾಲಾಗಳನ್ನು ಮಹಿಳಾ ಪೂರಕ ಪೌಷ್ಠಿಕ ಆಹಾರ ಉತ್ಪಾದನಾ ಕೇಂದ್ರಗಳು (ಎಂ.ಎಸ್.ಪಿ.ಸಿ.) ತಮ್ಮ ಹಂತದಲ್ಲಿಯೇ ಸ್ಥಳೀಯವಾಗಿ ಖರೀದಿಸುತ್ತಿವೆ ಹಾಗೂ ಪುಷ್ಠಿ ಮತ್ತು ಮಿಲ್ಲೆಟ್ ಲಾಡುಗಳನ್ನೂ ಸಂಸ್ಕರಿಸಿ ಅಂಗನವಾಡಿ ಕೇಂದ್ರಗಳಿಗೆ ಸರಬರಾಜು ಮಾಡುತ್ತಿವೆ. |
| ಈ) | ಬಂದಿದ್ದಲ್ಲಿ, ಸ್ಥಳೀಯ ಗುತ್ತಿಗೆದಾರರನ್ನು ಪರಿಗಣಿಸಲು ಕೈಗೊಂಡ ಕ್ರಮಗಳೇನು? (ಪೂರ್ಣ ವಿವರ ಒದಗಿಸುವುದು) | ಅನ್ವಯಿಸುವುದಿಲ್ಲ. |

**ಸಂಖ್ಯೆ: ಮಮಇ 82 ಐಸಿಡಿ 2025**

**(ಲಕ್ಷ್ಮೀ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಸಚಿವರು